ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಮಂತ್ರಿ ಪಂಚಾಯತ್‌ರಾಜ್ ಮಂತ್ರಿಗಳು).—

ಅ) ಹೌದು.

ಆ) ತಡೆಯಾಜ್ಞೆ ನೀಡಲಾಗಿದೆ. ಆದರೆ ಇಂತಹ ನೌಕರರನ್ನು ಸರ್ಕಾರದ ನೌಕರರೆಂದು ಪರಿಗಣಿಸಲಾಗುವುದಿಲ್ಲ.

ಕಡೂರು ತಾಲ್ಲೂಕು ಕೇಂದ್ರಕ್ಕೆ ಪ್ರಥಮ ದರ್ಜೆ ಸರ್ಕಾರಿ ಕಾಲೇಜನ್ನು ಮಂಜೂರು ಮಾಡುವುದು.

೬೦೫. ಶ್ರೀ ಪಿ. ಬಿ. ಓಂಕಾರಮೂರ್ತಿ (ಕಡೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ತಾಲ್ಲೂಕು ಕೇಂದ್ರಗಳಿಗೆ ಪ್ರಥಮ ದರ್ಜೆ ಕಾಲೇಜುಗಳನ್ನು ಮಂಜೂರು ಮಾಡಿ ಕಡೂರು ತಾಲೂಕು ಕೇಂದ್ರಕ್ಕೆ ಪ್ರಥಮ ದರ್ಜೆ ಕಾಲೇಜು ಮಂಜೂರು ಮಾಡದೆ ಇರಲು ಕಾರಣವೇನು?

ಆ) ಹಾಗಿದ್ದಲ್ಲಿ ಮಂಜೂರು ಮಾಡಲು ಸರ್ಕಾರದವರು ಕ್ರಮಕೈಗೊಳ್ಳುವರೆ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಎಲ್ಲಾ ತಾಲ್ಲೂಕು ಕೇಂದ್ರಗಳಿಗೂ ಇನ್ನೂ ಮಂಜೂರು ಮಾಡಿಲ್ಲ.

ಆ) ಕಡೂರಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಮಂಜೂರು ಮಾಡುವ ವಿಚಾರ ಸದ್ಯದಲ್ಲಿ ಸರ್ಕಾರದ ಮುಂದೆ ಇಲ್ಲ.

ಪ್ರೌಢಶಾಲೆಗಳಲ್ಲಿ ಅಂಕಪಟ್ಟಿಗಾಗಿ ವಸೂಲು ಮಾಡುವ ಶುಲ್ಕದ ಬಗ್ಗೆ

೧೦೫೬. ಶ್ರೀ ಚಂದ್ರಶೇಖರ್ (ಗೌರಿಬಿದನೂರು):—ಮಾನ್ಯ ವಿದ್ಯಾಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.—

ಅ) ಪ್ರೌಢಶಾಲೆಗಳಲ್ಲಿ ಅಂಕಪಟ್ಟಿಯನ್ನು ಪೋಷಕರಿಗೆ ತಿಳಿಸಲು ೧-೫೦ ಪೈಸೆ ಶುಲ್ಕ ವಸೂಲಿ ಮಾಡಲಾಗುತ್ತಿದ್ದು, ಅಂತಹ ಯಾವ ಮಾಹಿತಿಯನ್ನು ನೀಡುತ್ತಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಸಂಗ್ರಹವಾದ ಹಣದ ವಿವರ ನೀಡುವುದು ;

ಆ) ಮಾಹಿತಿಯನ್ನು ಕೊಡಲು ಸಾಧ್ಯವಾಗದಿದ್ದಲ್ಲಿ ಆ ರೀತಿಯ ಶುಲ್ಕ ವಸೂಲಿಯನ್ನು ಸರ್ಕಾರದವರು ನಿಲ್ಲಿಸುವರೆ ;

ಇ) ವಸೂಲಾಗಿರುವ ಹಣವನ್ನು ಶಾಲೆಗಳ ದುರಸ್ತಿ, ಪೀಠೋಪಕರಣಗಳಿಗೆ ಉಪಯೋಗಿಸಲಾಗುವುದೇ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಈ ತರಹ ಶುಲ್ಕವನ್ನು ವಸೂಲಿ ಮಾಡುತ್ತಿಲ್ಲ ಮತ್ತು ಇಂತಹ ಪ್ರಕರಣವು ಸರ್ಕಾರದ ಗಮನಕ್ಕೆ ಬಂದಿಲ್ಲ.

ಆ) ಈ ಪ್ರಶ್ನೆ (ಅ) ಉತ್ತರದ ಪ್ರಕಾರ ಉದ್ಭವಿಸುವುದಿಲ್ಲ.

ಇ) ಈ ಪ್ರಶ್ನೆ (ಅ) ಉತ್ತರದ ಪ್ರಕಾರ ಉದ್ಭವಿಸುವುದಿಲ್ಲ.